# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | MONDAY | 9-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜಿ.ಎಮ್. ಸೋಯಾಮೀಲ್ ಆಮದು ಮಾಡಲು ಅವಕಾಶ, ದರ ಇಳಿಕೆ

ಜೀನ್ ಪರಿವರ್ತಿತ ಸೋಯಾಮೀಲ್ 1.5 ಮಿಲಿಯನ್ ಟನ್ ಆಮದಿಗೆ ಸರಕಾರ ಅನುಮತಿಸಿದ ನಂತರ ಸೋಯಾ ಮೀಲ್ ದರಗಳು 7–8 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಸೋಯಾಮೀಲ್ ದರಗಳು ಹೆಚ್ಚಾದ ನಂತರ ಪೌಲ್ಟ್ರಿ ಅಸೋಸಿಯೇಶನ್, ಆಮದಿಗಾಗಿ ಕೇಳಿಕೊಂಡಿತ್ತು. ಅದರನ್ವಯ ಸರಕಾರ 1.5 ಮಿಲಿಯನ್ ಟನ್ ಸೋಯಾಮೀಲ್ ಆಮದಿಗೆ ಅವಕಾಶ ನೀಡಿದೆಯೆನ್ನಲಾಗಿದೆ.

## ಆರು ತಿಂಗಳಲ್ಲಿ ಪ್ರಥಮ ಬಾರಿ ಮಲೇಶಿಯನ್ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು ಹೆಚ್ಚಳ

ಮಲೇಶಿಯನ್ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು ಎಪ್ರಿಲ್ ತಿಂಗಳಲ್ಲಿ ಹಿಂದಿನ ಆರು ತಿಂಗಳಿಂದೀಚೆ ಹೆಚ್ಚಳ ಕಾಣುವ ಸಾಧ್ಯತೆಯಿದ್ದು 1.55 ಮಿಲಿಯನ್ ಟನ್‌ಗಳಾಗಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಹಿಂದಿನ ವಾರ ದರ ಇಳಿಕೆ ಕಂಡಿದ್ದ ಪಾಮೆಣ್ಣೆ ದರ ಇಂದು ಅಲ್ಪ ಪ್ರಮಾಣದ ದರ ಹೆಚ್ಚಳವಾಗಿದೆ, ಆದರೆ ಎಪ್ರಿಲ್ ತಿಂಗಳ ಇನ್‌ವೆಂಟರಿ ದಾಸ್ತಾನು ಹೆಚ್ಚಳವಾಗುವ ಅಂದಾಜಿನಿಂದ ದರ ಹೆಚ್ಚಳಕ್ಕೆ ತಡೆಯುಂಟಾಗಿದೆ.

## ವಿಯೆಟ್ನಾಂ ಕಚ್ಚಾ ಗೋಡಂಬಿ ಉತ್ಪಾದನೆ, ಹವಾಮಾನ ವೈಪರೀತ್ಯದಿಂದ ಕಡಿಮೆ

ವಿಯೆಟ್ನಾಂ ನ ಬಿನ್ ಪೊನಕ್ ಪ್ರಾಂತ್ಯದಲ್ಲಿ ಹವಾಮಾನ ವೈಪರೀತ್ಯದಿಂದ ಕಚ್ಚಾ ಗೋಡಂಬಿ ಉತ್ಪಾದನೆ 50 ಶೇಕಡಾ ಇಳಿಕೆಯಾಗಬಹುದೆನ್ನಲಾಗಿದೆ. ಕಾಂಬೋಡಿಯಾದಲ್ಲೂ ಹವಾಮಾನ ವೈಪರೀತ್ಯದಿಂದ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. ಆಫ್ರಿಕಾ ಮತ್ತು ಕಾಂಬೋಡಿಯಾದಿಂದ ಆಮದು ಮಾಡಲು ದೀರ್ಘಾವದಿ ಸಮಯ ತಗಲುತ್ತಿದೆ ಹಾಗೂ ಅಲ್ಲಿನ ಕಚ್ಚಾ ಗೋಡಂಬಿ ಗುಣಮಟ್ಟ ವಿಯೆಟ್ನಾಂ ನ ಕಚ್ಚಾ ಗೋಡಂಬಿಯ ಗುಣಮಟ್ಟದಷ್ಟು ಉತ್ತಮವಿಲ್ಲವೆನ್ನಲಾಗಿದೆ. ಇದರಿಂದ ವಿಯೆಟ್ನಾಂನ ಗೋಡಂಬಿ ಉತ್ಪಾದನೆ ಕೈಗಾರಿಕೆ ಕಚ್ಚಾ ಗೋಡಂಬಿಯ ತೀವ್ರ ಕೊರತೆಯನ್ನೆದುರಿಸುತ್ತಿದೆಯೆನ್ನಲಾಗಿದೆ.

## ಜೋಳ ದರ ಇಳಿಕೆ

ದಾವಣಗೆರೆಯ ಮಾರುಕಟ್ಟೆಯಲ್ಲಿ ಬೇಡಿಕೆ ಇಳಿಕೆಯಿಂದ ಜೋಳ ದರ ದುರ್ಬಲವಾಗಿದೆಯೆನ್ನಲಾಗಿದೆ. ತೆಲಂಗಾಣ ಹಾಗೂ ಆಂಧ್ರಪ್ರದೇಶಗಳಲ್ಲಿ ಹೊಸ ಬೆಳೆಯ ಜೋಳ ಆವಕ ಪ್ರಾರಂಭವಾಗಿದೆಯೆನ್ನಲಾಗಿದೆ. ಕೆಲವು ರಾಜ್ಯಗಳಲ್ಲಿ ಮಳೆಯಿಂದ ವ್ಯವಹಾರ ಬಾಧಿತಗೊಂಡಿದೆಯೆನ್ನಲಾಗಿದ್ದು ಹೊಸ ಬೆಳೆಯ ಆವಕ ಹೆಚ್ಚಳವಾದಲ್ಲಿ ದರ ಇಳಿಕೆಯಾಗುವ ಸಾಧ್ಯತೆಯಿದೆ.